**MVC. No. 664/2025**
**PW-1**

**ದಿನಾಂಕ 01.7.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಶ್ರೀ. ಆರ್.ಎ.ಎನ್. ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿರುವ ಸಂಗತಿಗಳು ನನ್ನ ಮಾಹಿತಿ, ತಿಳುವಳಿಕೆ ಹಾಗೂ ನಂಬಿಕೆ ಮೇರೆಗೆ ಸತ್ಯವಾಗಿದ್ದು ನನ್ನ ಸೂಚನೆಯಂತೆ ಬರೆಯಲ್ಪಟ್ಟಿದೆ. ಅದರಲ್ಲಿರುವ ಸಹಿ ನನ್ನದು ಇರುತ್ತದೆ.

ನಾನು ಹಾಜರುಪಡಿಸಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗಳನ್ನಾಗಿ ಗುರುತಿಸಲಾಯಿತು.

| | |
|---|---|
| ನಿಪಿ-1 | ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲು |
| ನಿಪಿ-2 | ದೂರಿನ ದೃಢೀಕೃತ ನಕಲು |
| ನಿ.ಪಿ-3 | ಘಟನಾ ಸ್ಥಳದ ಪಂಚನಾಮೆಯ ದೃಢೀಕೃತ ನಕಲು |
| ನಿಪಿ-4 | ಜಪ್ತಿ ಪಂಚನಾಮೆಯ ದೃಢೀಕೃತ ನಕಲು |
| ನಿ.ಪಿ-5 | ಎಮ್.ವಿ.ಎ. ರಿಪೋರ್ಟನ ದೃಢೀಕೃತ ನಕಲು |
| ನಿ.ಪಿ-6 | ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲು |
| ನಿ.ಪಿ-7 | ಚಾರ್ಜಶೀಟನ ಧೃಡೀಕೃತ ನಕಲು |
| ನಿ.ಪಿ-8 | ಅಂಗನ್ಯೂನ್ಯತೆ ಪ್ರಮಾಣ ಪತ್ರ |
| ನಿ.ಪಿ-9 | ಎಕ್ಸರೆ ವರದಿ |
| ನಿ.ಪಿ.-10 | ಆಸ್ಪತ್ರೆಯ ಬಿಲ್ |
| ನಿ.ಪಿ.-11 | ನನ್ನ ಮೂಲ ಆಧಾರ ಕಾರ್ಡ |
| ನಿ.ಪಿ.-12 | ಡಿಸಚಾರ್ಜ ಸಮ್ಮರಿ |

**ಪಾಟೀ ಸವಾಲು: ಶ್ರೀ ಎಸ್.ಎಸ್.ಕೆ. ವಕೀಲರಿಂದ :-**

ಅಪಘಾತವು 17.3.2025 ರಂದು ಆಗಿರುತ್ತದೆ. ಆ ದಿನ ನಾನು ಮೋಟರ ಸೈಕಲ ಮೇಲೆ ಸಂತಪೂರದಿಂದ ಎಕಲಾರಗೆ ಹೋಗುತ್ತಿದ್ದೇವು. ಆ ದಿನ ಮೋಟರ ಸೈಕಲ ಮೇಲೆ ನಾನು ಮತ್ತು ನನ್ನ ಪ್ರತಿ ಇದ್ದೇವು. ಸದರಿ ಮೋಟರ ಸೈಕಲ ನನ್ನ ಪತಿಗೆ ಸೇರಿರುತ್ತದೆ. ದೂರನ್ನು ನಾನೇ ಕೊಟ್ಟಿರುತ್ತೇನೆ. ನನ್ನ ಪತಿ ಮತ್ತು ನಾನು ಪ್ರಯಾಣಿಸುತ್ತಿದ ಮೋಟರ ಸೈಕಲಗೆ ವಿಮೆಯ ನವೀಕರಣ ಆಗಿರುವುದಿಲ್ಲ ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎನ್ನುತ್ತಾರೆ. ಅದ್ದರಿಂದ ಪೋಲಿಸರು ಪ್ರಭು ಜಾಧವ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎನ್ನುತ್ತಾರೆ. ಅಪಘಾತವು ಸಾಯಂಕಾಲ ಆಗಿರುತ್ತದೆ. ಅಪಘಾತ ನಡೆದಾಗ ಸ್ಥಳದಲ್ಲಿ ಯಾರು ಇರಲಿಲ್ಲ ನಂತರದಲ್ಲಿ ನಮ್ಮ ತಾಂಡ ಹುಡುಗರು ಬಂದಿರುತ್ತಾರೆ. ಅಪಘಾತ ಸ್ಥಳದಲ್ಲಿ ಬೀದರ ಔರಾದ ಹೇದ್ದಾರಿ ಇದ್ದು ಸಾಕಷ್ಟು ವಾಹನಗಳು ಓಡಾಡುತ್ತಾವೆ ಎಂದರೆ ನಿಜ. ಅಪಘಾತದ ದಿನ ನನ್ನ ಗಂಡ ಯಾವುದೆ ಇಂಡಿಕೆಟರ ಹಾಕದೆ ತನ್ನ ತಪ್ಪಿನಿಂದ ಹಾಗೂ ನಿರ್ಲಕ್ಷ್ಯತನದಿಂದ ಮೋಟರ ಸೈಕಲನನ್ನು ಬಲಬದಿಗೆ ತಿರುಗಿಸಿ ಅಪಘಾತ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಯಾವುದೇ ಅಪರಿಚಿತ ವಾಹನದಿಂದ ಸದಿರ ಅಪಘಾತ ಜರುಗಿದೆ ಎಂದರೆ ಸರಿಯಲ್ಲ ಅಪಘಾತ ನಡೆದ ನಂತರ ಒಂದು ದಿನ ವಿಳಂಬ ಮಾಡಿ ಪರಿಹಾರದ ಸಲುವಾಗಿ 1 ನೇ ಎದುರುದಾರನ ವಾಹನದ ಮೇಲೆ ಸುಳ್ಳು ಕೇಸ್ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಆದ ತಕ್ಷಣ ನಾನು ಸಂತಪೂರ ಸರ್ಕಾರಿ ಆಸ್ಪತ್ರೆಗೆ ಹೋಗಿದೆ. ಸದರಿ ಅಪಘಾತದಲ್ಲಿ ನನಗೆ ಯಾವುದೇ ಗಾಯ ಆಗಿಲ್ಲ ಎಂದರೆ ಸರಿಯಲ್ಲ. ನಿಪಿ.6 ರಲ್ಲಿ ತೋರಿಸಿದ ಗಾಯಗಳು ಸಾದ ಗಾಯಗಳು ಇರುತ್ತವೆ ಎಂದರೆ ಸರಿಯಲ್ಲ. ನಿಪಿ-13 ರಲ್ಲಿ ತೋರಿಸಿದ ದಿನಗಳಂದು ನನಗೆ ಯಾವುದೇ ಶಾಸ್ತ್ರ ಚಿಕಿತ್ಸೆ ಮಾಡಲಾಗಿಲ್ಲ ಎಂದರೆ ನಿಜ. ಪರಿಹಾರ ಸಲುವಾಗಿ ಸುಳ್ಳು ನಿಪಿ-8 ದಾಖಲೆಯನ್ನು ಹಾಜರುಪಡಿಸಿದ್ಧೇನೆ ಎಂದರೆ

ಸರಿಯಲ್ಲ. ನನಗೆ ಯಾವುದೇ ಅಪರೇಶ ಆಗಿಲ್ಲ ಆದ್ದರಿಂದ ಯಾವುದೇ ಅಂಗನ್ಯೂನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತದ ಪೂರ್ವದಲ್ಲಿ ಯಾವ ರೀತಿ ಸಮರ್ಥಳಾಗಿ ಕೆಲಸ ಮಾಡುತ್ತಿದೇ ಅದೇ ರೀತಿ ಈಗಲು ಕೂಡ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಸಲುವಾಗಿ ವೈದ್ಯರಿಗೆ ವಿನಂತಿಸಿ ಹೆಚ್ಚಿನ ಮೊತ್ತದ ಬಿಲ್ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಆದಾಗ ನನ್ನ ವಯಸ್ಸು 26 ಇತ್ತು. ನಾನು ಪ್ರತಿ ತಿಂಗಳು ರೂ. 21000 ಆದಾಯ ಹೊಂದಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ನಿರ್ಲಕ್ಷ್ಯತನದಿಂದ ಸದರಿ ಅಪಘಾತ ಜರುಗಿರುತ್ತದೆ ಎಂದರೆ ಸರಿಯಲ್ಲ. ಪರಿಹಾರದ ಸಲುವಾಗಿ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :** ಇಲ್ಲ.

(ನನ್ನ ಉಕ್ತ ಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ ಮೇಲೆ ಟೈಪ್/ಪ್ರಿಂಟ ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಔರಾದ.

**MVC. No. 143/2023**
**PW-1**

**<u>ದಿನಾಂಕ 19-02-2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ. ಎಸ್.ಎಸ್.ಕೆ. ವಕೀಲರಿಂದಃ</u>**

ನನಗೆ 3 ಜನ ಹೆಣ್ಣು ಮಕ್ಕಳು ಮಾತ್ರ ಇರುತ್ತಾರೆ, ಅವರು ಯಾರೆಂದರೆ ಅಂಬಿಕಾ, ರೇಣುಕಾ (ಅರ್ಜಿದಾರ ನಂ. 2) ಮತ್ತು ಸುರೇಖಾ (ಅರ್ಜಿದಾರ ನಂ. 3). ಈ ಪ್ರಕರಣದಲ್ಲಿ ಅಂಬಿಕಾ ರವರನ್ನು ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ನಿಜ, ಏಕೆಂದರೆ ಆಕೆಯ ವಿವಾಹ ಆಗಿದೆ. ಅಂಬಿಕಾ ವಿವಾಹವಾಗಿ 7-8 ವರ್ಷಗಳು ಆಗಿವೆ. 2 ನೇ ಅರ್ಜಿದಾರಳು ಶಾಲೆ ಕಲೆತಿಲ್ಲ, ಕೂಲಿ ಕೆಲಸ ಮಾಡುತ್ತಾಳೆ. 3 ನೇ ಅರ್ಜಿದಾರಳು ಕೂಡ ಶಾಲೆ ಕಲೆತಿಲ್ಲ, ಆದರೆ ಕೂಲಿ ಕೆಲಸ ಮಾಡುತ್ತಾಳೆ.

2. ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ. ಅಪಘಾತದ ಬಗ್ಗೆ ನನಗೆ ನನ್ನ ಗ್ರಾಮದವರು ತಿಳಿಸಿದ್ದಾರೆ, ಆಗ ನಾನು ಉಜ್ಜನಿ ಗ್ರಾಮದ ನನ್ನ ಮನೆಯಲ್ಲಿ ಇದ್ದೆ. ನನ್ನ ಗಂಡ ಗುಲಬರ್ಗಾಕ್ಕೆ ಹೋಗಿದ್ದರು. ನನ್ನ ಗಂಡ ಕಬ್ಬು ಕಡಿಯಲಿಕ್ಕೆ ಹೋಗಿರಲಿಲ್ಲ ಎಂದರೆ ಸುಳ್ಳು. ನನ್ನ ಗಂಡ ಈರೇಶ ಮತ್ತು ಸುರೇಶ ಜೊತೆ ಗುಲಬರ್ಗಾಕ್ಕೆ ಹೋಗಿದ್ದರು, ಆದರೆ ಕಬ್ಬು ಕಡಿಯಲಿಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ವಯಸ್ಸಾಗಿದ್ದರಿಂದ ಕಿವಿ ಕಡಿಮೆ ಕೇಳಿಸುತ್ತಿದ್ದವು ಎಂದರೆ ಸುಳ್ಳು. ಅಪಘಾತದ ಸ್ಥಳದಲ್ಲಿ ರಾಷ್ಟ್ರೀಯ ಹೆದ್ದಾರಿ ಇರುವುದರಿಂದ ಸಾಕಷ್ಟು ವಾಹನಗಳು ಪ್ರಯಾಣಿಸುತ್ತವೆ ಎಂದರೆ ನಿಜ. ಬೇರೆ ಯಾವುದೋ ವಾಹನದಿಂದ ಅಪಘಾತ ಆಗಿದ್ದು ಈ ಪ್ರಕರಣದಲ್ಲಿ ತೋರಿಸಿದ ವಾಹನದ ಮೇಲೆ ಸುಳ್ಳು ದೂರು ಕೊಡಲಾಗಿದೆ ಎಂದರೆ ಸರಿಯಲ್ಲ. ಅಪಘಾತ ಆದ ನಂತರ ದೂರು ಕೊಡಲು 1 ದಿನ ವಿಳಂಬ ಆಗಿದೆ ಎಂದರೆ ನಿಜ. ಸದರಿ ವಿಳಂಬದ ಅವಧಿಯಲ್ಲಿ ಈ ಪ್ರಕರಣದಲ್ಲಿ ತೋರಿಸಿದ ವಾಹನವನ್ನು ನಾವು ಪರಿಹಾರದ ಸಲುವಾಗಿ ಸುಳ್ಳು ಸೇರಿಸಿದ್ದೇವೆ ಎಂದರೆ ಸರಿಯಲ್ಲ.

3. ಅಪಘಾತ ಆದಾಗ ಎಷ್ಟು ಸಮಯ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅಪಘಾತ ಆದಾಗ ಅಂದಾಜು ಸಾಯಂಕಾಲ 7 ರಿಂದ 7:30 ಗಂಟೆ ಆಗಿದ್ದರಿಂದ ಕತ್ತಲೆ ಆಗಿತ್ತು ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಅಪಘಾತವನ್ನು ಪ್ರತ್ಯಕ್ಷವಾಗಿ ಯಾರು ನೋಡಿಲ್ಲ ಎಂದರೆ ಸರಿಯಲ್ಲ. ಬೇರೆ ವಾಹನದಿಂದ ಅಪಘಾತ ಆಗಿದ್ದು ಪರಿಹಾರದ ಸಲುವಾಗಿ ಈ ಪ್ರಕರಣದಲ್ಲಿ ತೋರಿಸಿದ ವಾಹನವನ್ನು ಸೇರಿಸಲಾಗಿದೆ ಎಂದರೆ ಸರಿಯಲ್ಲ.

4. ನನ್ನ ಪತಿಯ ವಯಸ್ಸು 62 ವರ್ಷ ಇತ್ತು ಎಂದರೆ ಸರಿಯಲ್ಲ, ಸಾಕ್ಷಿಯು 50 ವರ್ಷ ಇತ್ತು ಎಂದು ನುಡಿಯುತ್ತಾರೆ. ವಯಸ್ಸಾಗಿದ್ದರಿಂದ ನನ್ನ ಪತಿ ಕಬ್ಬು ಕಡಿಯಲು ಸಾಧ್ಯ ಇರಲಿಲ್ಲ ಎಂದರೆ ಸರಿಯಲ್ಲ. ವಯಸ್ಸಿನ ಬಗ್ಗೆ ನಾನು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಪತಿ ಪ್ರತಿ ತಿಂಗಳು 21,000/- ರೂ. ಹಣ ಗಳಿಸುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 1 ನೇ ಎದುರುದಾರ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು, ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.</u>

<u>ಮರು ವಿಚಾರಣೆಃ ಇಲ್ಲ.</u>

(ನನ್ನ ಉಕ್ತ ಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ ಮೇಲೆ ಟೈಪ್/ಪ್ರಿಂಟ ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಔರಾದ.